# ಅಪಾಯಕಾರಿ 'ಎನರ್ಜಿ ಸೇವರ್' ವಿದ್ಯುದ್ದೀಪಗಳು!

ಬ್ರಿಟನ್ನಿನ ಆರೋಗ್ಯ ಇಲಾಖೆ ಜಗತ್ತಿನ ಪರಿಸರ ಸಂರಕ್ಷಣೆಗಾಗಿ ಕರೆಗಂಟೆಯೊಂದನ್ನು ಅದುಮಿದೆ.

'ಎನರ್ಜಿ ಸೇವರ್' ಎಂದೇ ನಾಮಾಂಕಿತಗೊಂಡಿರುವ, ವಿದ್ಯುಚ್ಛಕ್ತಿ ಉಳಿತಾಯ ಮಾಡುವುದೆಂದು ಅಥವಾ ಕಡಿಮೆ ವಿದ್ಯುಚ್ಛಕ್ತಿ ಬಳಕೆಯಾಗುವುದೆಂದು ನಾವು ಉಪಯೋಗಿಸುವ, ಟಿ.ವಿಗಳಲ್ಲಿ 'ಶೇ. 80 ಎನರ್ಜಿ ಉಳಿತಾಯ ಮಾಡುವ ಸೇವಿಂಗ್ ಅಕೌಂಟ್' ಎಂದೇ ಜಾಹೀರಾತು ಪಡೆಯುತ್ತಿರುವ ಹಾಗೂ ವಿಶ್ವದ 159ಕ್ಕೂ ಹೆಚ್ಚಿನ ದೇಶಗಳಲ್ಲಿ ಇದೀಗ ಜನಪ್ರಿಯವಾಗಿ ಉಪಯೋಗಿ ಸಲ್ಪಡುತ್ತಿರುವ ಸಿ.ಎಫ್.ಎಲ್. (ಕಾಂಪ್ಯಾಕ್ಟ್ ಫ್ಲೋರಸೆಂಟ್ ಲ್ಯಾಂಪ್) ಬಲ್ಬುಗಳು, ಒಂದು ವೇಳೆ ಒಡೆದರೆ ತುಂಬಾ ಅಪಾಯಕಾರಿಯಾಗಬಲ್ಲವೆಂದು ಬ್ರಿಟಿಷ್ ಆರೋಗ್ಯ ಇಲಾಖೆ ಎಚ್ಚರಿಕೆ ನೀಡಿದೆ. ಒಂದು ರೂಮಿನೊಳಗೆ ಒಂದು ಬಲ್ಬ್ ಒಡೆದರೂ ಕನಿಷ್ಠ 15 ನಿಮಿಷ ನಾವು ಆ ರೂಮನ್ನು ಬಿಟ್ಟು ಹೊರಗಿರಬೇಕಾದಷ್ಟು ಅಪಾಯಕಾರಿ ಅದಾಗಿದೆಯಂತೆ! ಏಕೆಂದರೆ ಅದರೊಳಗಿನ ಅನಿಲವು ಪಾದರಸದ ಅಂಶವನ್ನೊಳಗೊಂಡಿದೆ. ಪಾದರಸವು ಸೀಸಕ್ಕಿಂತಲೂ ಹೆಚ್ಚು ಅಪಾಯಕಾರಿಯಾಗಿದೆ. ಇದನ್ನು ಶ್ವಾಸೋಚ್ಛ್ವಾಸ ಮಾಡಿದರೆ ಮೈಗ್ರೇನ್‌ನಂತಹ ತಲೆನೋವು ಹಾಗೂ ಅಸಮತೋಲತೆಯನ್ನೂ, ಸ್ಪರ್ಶಿಸಿದರೆ ಅಲರ್ಜಿಯಂತಹ ಚರ್ಮದ ತೊಂದರೆಗಳನ್ನು ಉಂಟು ಮಾಡಬಲ್ಲುದಂತೆ!




ಒಡೆದ ಬಲ್ಬಿನ ಚೂರುಗಳನ್ನು ವ್ಯಾಕ್ಯೂಮ್ ಕ್ಲೀನರ್ ಬಳಸಿ ಸ್ವಚ್ಛಗೊಳಿಸಬಾರದೆಂದೂ ಅಲ್ಲಿನ ಆರೋಗ್ಯ ಇಲಾಖೆ ಸಲಹೆ ನೀಡಿದೆ. ಏಕೆಂದರೆ ವ್ಯಾಕ್ಯೂಮ್ ಕ್ಲೀನರ್‌ನಿಂದ ಸ್ವಚ್ಛಗೊಳಿಸಿದಾಗ ಅದು ಇತರ ಕೋಣೆಗಳಿಗೂ ವಿಷಾನಿಲವನ್ನು ಹರಡಬಲ್ಲುದಾಗಿದೆ. ಅವುಗಳನ್ನು ಪೊರಕೆ ಅಥವಾ ಬ್ರಷ್‌ಗಳಿಂದ ಸ್ವಚ್ಛಗೊಳಿಸಿ ಚೀಲದೊಳಗೆ ತುಂಬಿ ಬಾಯಿ ಮುಚ್ಚಿ ಮನೆಯಿಂದ ದೂರ ಅಪಾಯಕಾರಿ ತ್ಯಾಜ್ಯ ವಸ್ತುಗಳ ತೊಟ್ಟಿಯೊಳಗೇ ಹಾಕಬೇಕು.

ಒಂದೊಮ್ಮೆ ಮನೆಯೊಳಗೆ ಸಿ.ಎಫ್.ಎಲ್. ಬಲ್ಬುಗಳು ಒಡೆದರೆ ನಾಗರಿಕರೇನು ಜಾಗ್ರತೆ ವಹಿಸಬೇಕೆಂದು ಬ್ರಿಟನ್ನಿನ ಆಹಾರ ಮತ್ತು ಪರಿಸರ ಸಂರಕ್ಷಣಾ ಇಲಾಖೆ ಈ ಕೆಳಗಿನಂತೆ ಮಾರ್ಗದರ್ಶನ ನೀಡಿದೆ.

- ಒಡೆದ ಚೂರುಗಳ ಮೇಲೆ ಕಾಲೂರದಂತೆ ಜಾಗ್ರತೆ ವಹಿಸಿ ಕೂಡಲೇ ಆ ಕೋಣೆಯಿಂದ ಹೊರ ಹೋಗಬೇಕು.
- ನಂತರ, ಸ್ವಚ್ಛ ಗೊಳಿಸಲೆಂದು ವ್ಯಾಕ್ಯೂಮ್ ಕ್ಲೀನರ್ ಉಪಯೋಗಿಸಬಾರದು.
- ಕೈಗಳಿಗೆ ರಬ್ಬರ್ ಗ್ಲೌಸ್‌ಗಳನ್ನು ತೊಟ್ಟು ಒಡೆದ ಚೂರುಗಳನ್ನು ಪೊರಕೆಯಿಂದ ಗುಡಿಸಿ ಒಂದು ಕಸದ ಬುಟ್ಟಿಗೆ ಹಾಕಬೇಕು.
- ಕಸದ ಬುಟ್ಟಿಯಿಂದ ಪ್ಲಾಸ್ಟಿಕ್ ಚೀಲದೊಳಗೆ ಸುರಿದು 'ಸೀಲ್' ಮಾಡಬೇಕು.
- ಈ ಚೀಲವನ್ನು ಸಾಮಾನ್ಯ ಕಸದ ತೊಟ್ಟಿಯೊಳಗೆ ಎಸೆಯಬಾರದು.
- ಮುನಿಸಿಪಾಲಿಟಿಯು ಬ್ಯಾಟರಿಯಂತಹ ಪಾದರಸಯುಕ್ತ ವಸ್ತುಗಳಿಗಾಗಿ ಇರಿಸಿದ ಪ್ರತ್ಯೇಕ ಕಸದ ತೊಟ್ಟಿಯೊಳಗೇ ಹಾಕಬೇಕು.
- ಒಡೆದ ಬಲ್ಬುಗಳಿಂದ ಹೊರ ಹೊಮ್ಮುವ ಹೊಗೆಯನ್ನು ಉಸಿರಾಡದಂತೆ ಎಚ್ಚರಿಕೆ ವಹಿಸಬೇಕು.

ಆದ್ದರಿಂದ ಎಚ್ಚರಿಕೆ; ನಿಮ್ಮ ಉಳಿತಾಯದ 'ಸೇವಿಂಗ್ಸ್ ಅಕೌಂಟ್' ವೈದ್ಯರ ಬ್ಯಾಂಕ್ ಅಕೌಂಟ್‌ಗೆ ಕ್ರಮೇಣ ಸೇರದಂತೆ ಜಾಗ್ರತೆ ವಹಿಸಿರಿ!

(ಸಾಧಾರ)

★ ರಮಣ್ ಶೆಟ್ಟಿ ರೆಂಜಾಳ್




**ಬಿಳಿ ಮಚ್ಚೆಗಳಿಗೆ**

ಪರಿಣಿತಿಯನ್ನು 50,000 ರೋಗಿಗಳು ಮೆಚ್ಚಿದ್ದಾರೆ.

ಹೊಸದಾಗಿ ಕಂಡುಹಿಡಿಯಲಾದ ಈ ಔಷಧಿಯನ್ನು ಉಪಯೋಗಿಸುವುದರಿಂದ ನಿಮ್ಮ ತ್ವಚೆಯ ವರ್ಣವು ಅಲ್ಪಕಾಲದಲ್ಲೇ ನೈಜವಾಗಿ ಬದಲಾಗುವುದು. ನಿಮ್ಮ ಕಾಯಿಲೆಯ ವಿವರಗಳನ್ನು ಕಳುಹಿಸಿರಿ ಅಥವಾ ದೂರವಾಣಿ ಮೂಲಕ ಮುಖ್ಯ ವೈದ್ಯಜಿಯನ್ನು ಸಂಪರ್ಕಿಸಿ.



**ಲೈಂಗಿಕ ಸಮಸ್ಯೆ**

**ಖಂಡಿತ ಗುಣವಾಗುವುದು**

ನಪುಂಸಕತೆ, ಗೊನೊರಿಯ, ಸಿಫಿಲಿಸ್, ಬಂಜೆತನ ಹಾಗೂ ಇತರೆ ಗೋಪ್ಯ ಲೈಂಗಿಕ ಸಮಸ್ಯೆಗಳನ್ನು ಆಯುರ್ವೇದಿಕ್ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ಒಂದು ಕೋರ್ಸ್ ಔಷಧಿ ಹಾಗೂ ಉಚಿತ ಲಿಂಗವರ್ಧಕ್‌ಗೆ ನಮ್ಮನ್ನು ಸಂಪರ್ಕಿಸಲು ಸಂಕೋಚಪಡದಿರಿ.

**ಸ್ತ್ರೀ ರೋಗ**

ಬಿಳಿಸೆರಗು– ಬಿಳಿ ಅಥವಾ ರಕ್ತ, ಮುಟ್ಟಿನ ತೊಂದರೆ, ಬಂಜೆತನ, ರಕ್ತಹೀನತೆ ಅಶಕ್ತತೆ, ಸೊಂಟದ ನೋವು ಇತ್ಯಾದಿಗೆ ಖಾತರಿಯಾದ ಚಿಕಿತ್ಸೆಗಾಗಿ ಕೂಡಲೆ ನಮ್ಮನ್ನು ಸಂಪರ್ಕಿಸಿ.

**ಆಕರ್ಷಕ ಸ್ತನಗಳಿಗೆ**



ನಮ್ಮ ಯಶಸ್ವಿ ಆಯುರ್ವೇದಿಕ್ ಚಿಕಿತ್ಸೆ ಪಡೆದು ಅಲ್ಪಕಾಲದಲ್ಲೇ ನಿಮ್ಮ ಸ್ತನಗಳು ಸೂಕ್ತ ವೃದ್ಧಿ ಹೊಂದಲು ನಮ್ಮನ್ನು ಮುಕ್ತವಾಗಿ ಸಂಪರ್ಕಿಸಿರಿ.

**Asia Ayurved P.O. Katri Sarai (Gaya)**

**Phone: 0631-2224881**
**09931840701 / 09334221088**
**09431025482 / 09835671211**